# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಲ್. ಎನ್. ಬೆಳವಣಿಕಿ, ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ- ಇವರ ವಿರುದ್ಧ ಲೋಕಾಯುಕ್ತ ಟ್ರಾಪ್ ಪ್ರಕರಣ. ಕುರಿತು.

## ಓದಲಾಗಿದೆ:-

1) ಅಪರ ಪೋಲಿಸ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಜಿ-27/ಸಿಆರ್ 6/2011 ಕೊಪ್ಪಳ, ದಿನಾಂಕ: 25-06-2011.
2) ಕರ್ನಾಟಕ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ಇವರ ರಿಟ್ ಅರ್ಜಿ ಸಂ. 63805/2001, ರಲ್ಲಿ ದಿನಾಂಕ: 25-07-2011ರ ಆದೇಶ,

## ಪ್ರಸ್ತಾವನೆ:-

ಶ್ರೀ ಎಲ್. ಎನ್. ಬೆಳವಣಿಕಿ, ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ, ಇವರು ಕೃಷಿ ಇಲಾಖೆಯ ವಿವಿಧ ಕಾಮಗಾರಿಗಳು, ಸಹಾಯ ಧನದ ಯೋಜನೆಗಳು, ಕೃಷಿ ಉತ್ತೇಜನದ ಯೋಜನೆಗಳ ಹಣ ಬಿಡುಗಡೆಯ ಬಿಲ್ಲುಗಳನ್ನು ಮಂಜೂರು ಮಾಡುವ ಕಾಲಕ್ಕೆ, ಕಮಿಷನ್ ರೂಪದಲ್ಲಿ ಪಡೆದ ಹಣವನ್ನು ಬಿಳಿ ಬಣ್ಣದ ಇಂಡಿಕಾ ಕಾರ್ ಸಂ. ಕೆ.ಎ 37- 8752ರಲ್ಲಿ ಅನಧಿಕೃತವಾಗಿ ಸಾಗಿಸುತ್ತಿದ್ದಾರೆಂಬ ಮಾಹಿತಿ ಬಂದ ಪ್ರಯುಕ್ತ, ಅವರು ಪ್ರಯಾಣಿಸುತ್ತಿದ್ದ ಸದರಿ ಕಾರನ್ನು ತಡೆದು ಪರಿಶೀಲಿಸಿ ತಪಾಸಣೆ ಮಾಡಲಾಗಿ ಕಾರಿನಲ್ಲಿ ರೂ. 7,05,000/-ಸಿಕ್ಕಿದ್ದು. ಈ ಮೊತ್ತದ ಬಗ್ಗೆ ವಿಚಾರಿಸಿದಾಗ ಸದರಿ ಜಂಟಿ ಕೃಷಿ ನಿರ್ದೇಶಕರು, ಸಮರ್ಪಕ ಉತ್ತರ ನೀಡದೇ ಇರುವುದರಿಂದ ಸದರಿಯವರ ವಿರುದ್ಧ ಕೊಪ್ಪಳ ಲೋಕಾಯುಕ್ತ ಠಾಣೆ, ಮೊಕದ್ದಮೆ ಸಂ. 6/2011ರಲ್ಲಿ ಲಂಚ ನಿರ್ಮೂಲನಾ ಕಾಯ್ದೆ 1988ರ ಕಲಂ 7,13(1) ಸಹಿತ 13(2) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಯಿತೆಂದು ಮತ್ತು ಸದರಿಯವರುವನ್ನು ದಸ್ತಗಿರಿ ಮಾಡಿ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಯಿತೆಂದು ವರದಿ ಮಾಡಿರುತ್ತಾರೆ. ಹಾಗೂ ಸದರಿಯವರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬಿತಾಗಿದ್ದು, ಇವರು ಸೇವೆಯಲ್ಲಿ ಮುಂದುವರೆದರೆ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶ ಪಡಿಸುವ ಸಾಧ್ಯತೆಗಳಿರುವುದರಿಂದ ಅವರನ್ನು ಕೂಡಲೇ ಅಮಾನತ್ತಿನಲ್ಲಿಡಬೇಕೆಂದು, ಹಾಗೂ ಅವರ ಲೀನನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಮೇಲೆ ಕ್ರಮಾಂಕ-1ರಲ್ಲಿ ಓದಲಾದ ದಿನಾಂಕ: 25-06-2011 ಪತ್ರದಲ್ಲಿ ಅಪರ ಪೋಲಿಸ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸರ್ಕಾರವನ್ನು ಕೋರಿರುತ್ತಾರೆ.

ಶ್ರೀ ಎಲ್. ಎಲ್. ಬೆಳವಣಿಕಿ, ಜಂಟಿ ಕೃಷಿ ನಿರ್ದೇಶಕರು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಸಂಚಾರಿ ಪೀಠ, ಇಲ್ಲಿ ರಿಟ್ ಅರ್ಜಿ ಸಂ. 63805/2011ಅನ್ನು ಸಲ್ಲಿಸಿ,,ಲೋಕಾಯುಕ್ತ ಕೊಪ್ಪಳ ಇವರು ತಮ್ಮ ಮೇಲಿರುವ ದಾಖಲಿಸಿರುವ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿದ ಹಿನ್ನೆಲೆಯಲ್ಲಿ ಸದರಿ ಅರ್ಜಿಯ ಮೇಲೆ ವಿಚಾರಣೆ ನಡೆಸಿದ ನ್ಯಾಯಾಲಯ ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ:ಳ 25-07-2011ರ ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ಈ ಕೆಳಗಿನಂತೆ ಆದೇಶ ನೀಡಿದೆ.

...2

"In the light of the facts and circumstance, I am of the view that the respondent has to place before this court the progress made in the investigation and substantiate its action in writing to the employer requiring the suspension of the petitioner.,

ಕರ್ನಾಟಕ ಉಚ್ಚ ನ್ಯಾಯಾಲಯ, ಸಂಚಾರಿ ಪೀಠ, ಧಾರವಾಡರವರ ಮೇಲ್ಕಂಡ ಆದೇಶವನ್ನು ಗಮನದಲ್ಲಿರಿಸಿಕೊಂಡು, ಶ್ರೀ ಎಲ್. ಎನ್. ಬೆಳವಣಿಕಿ, ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಇವರನ್ನು ಸೇವೆಯಿಂದ ನಿಲಂಬನೆಗೊಳಸುವ ಬದಲು ಅವರನ್ನು ಮುಂದಿನ ಆದೇಶದವರೆಗೆ ಸದರಿ ಹುದ್ದೆಯಿಂದ ಬೇರೆ ಕಡೆಗೆ ವರ್ಗಾಯಿಸಲು ತೀರ್ಮಾನಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂ. ಕೃಇ 22 ಕೃಪವಿ 2011,</u>

<u>ಬೆಂಗಳೂರು, ದಿನಾಂಕ: 06-09-2011</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ. ಎಲ್.ಎನ್. ಬೆಳವಣಿಕಿ, ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ. ಇವರನ್ನು **"ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕಾಂಪೋಸ್ಟ ಅಭಿವೃದ್ಧಿ ನಿಗಮ ನಿಯಮಿತ,,** ಇಲ್ಲಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶವರೆಗೆ ನಿಯೋಜನೆ ಮೇರೆಗೆ ವರ್ಗಾಯಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

6/9/11
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
6/9/11

ಇವರಿಗೆ:-

1) ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ), ಕರ್ನಾಟಕ, ಬೆಂಗಳೂರು.
2) ಅಪರ ಪೋಲೀಸ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.,
3) ಆಯುಕ್ತರು ಕೃಷಿ ಇಲಾಖೆ, ಶೇಷಾದ್ರಿ ರಸ್ತೆ ಬೆಂಗಳೂರು.
4) ಇನ್ಸಪೆಕ್ಟರ, ಕರ್ನಾಟಕ ಲೋಕಾಯುಕ್ತ ಪೋಲೀಸ್ ಠಾಣೆ, ಕೊಪ್ಪಳ.
5) ಸರ್ಕಾರಿ ವಕೀಲರು, ಕರ್ನಾಟಕದ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ (ರಿಟ್ ಅರ್ಜಿ ಸಂಖ್ಯೆ: 63805/2011ಕ್ಕೆ ಸಂಬಂಧಿಸಿದಂತೆ)
6) ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ.
7) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
8) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
9) ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಕಾರ್ಯದಶಿ, ಕೃಷಿ ಇಲಾಖೆ, ಬೆಂಗಳೂರು.
10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕಾಂಪೋಸ್ಟ ಅಭಿವೃದ್ಧಿ ನಿಗಮ ನಿಯಮಿತ ಹರಳಕುಂಟೆ ಮೈಸೂರು ರಸ್ತೆ, ಬೆಂಗಳೂರು-560068.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.